ಕರ್ನಾಟಕ ಸರ್ಕಾರ

ಜಿಲ್ಲಾ ಪಂಚಾಯತ್, ಹಾಸನ

ಆಯುಷ್ ಇಲಾಖೆ

ಜಿಲ್ಲಾ ಆಯುಷ್ ಅಧಿಕಾರಿಗಳ ಕಛೇರಿ, ಹೊಸಲೈನ್ ರಸ್ತೆ, ಹಾಸನ –573201.

ಇ-ಮೇಲ್ ವಿಳಾಸ: dao.hassan09@gmail.com

ದೂರವಾಣಿ ಸಂ: 08172-272272

ಸಂಖ್ಯೆ/ಜಿಆಕ/35/ಸಿಎಸ್ಎಸ್(ನೇಮಕಾತಿ)/2019-20

ದಿನಾಂಕ: 07-10-2020.

## ಕೇಂದ್ರಪುರಸ್ಕೃತ ಯೋಜನೆಯಡಿ ಗುತ್ತಿಗೆ ನೇಮಕಾತಿ ಅಧಿಸೂಚನೆ

ವಿಷಯ:- ಕೇಂದ್ರಪುರಸ್ಕೃತ ಯೋಜನೆಯಡಿ ಮೇಲ್ದರ್ಜೇಗೇರಿಸಲಾದ ಆಸ್ಪತ್ರೆಗಳಿಗೆ ತಾತ್ಕಾಲಿಕವಾಗಿ ಮಂಜೂರಾಗಿರುವ ತಜ್ಞ ವೈದ್ಯರು/ಅರೆ ವೈದ್ಯಕೀಯ ಸಿಬ್ಬಂದಿಗಳನ್ನು ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡುವ ಬಗ್ಗೆ.

ಉಲ್ಲೇಖ:-
1. ಆಯುಷ್ ನಿರ್ದೇಶನಾಲಯದ ಪತ್ರ ಸಂ: ಆಯುಷ್/52/ಐಇಸಿ(3)/2019-20, ದಿ:27/06/2020.
2. ಆಯುಷ್ ನಿರ್ದೇಶನಾಲಯದ ಪತ್ರ ಸಂ: ಆಯುಷ್/52/ಐಇಸಿ(3)/2018-19, ದಿ:12/10/2020.
3. ಆಯುಷ್ ನಿರ್ದೇಶನಾಲಯದ ಪತ್ರ ಸಂ: ಆಯುಷ್/07/ಐಇಸಿ(3)/2015-16, ದಿ:21/08/2020.
4. ಈ ಕಚೇರಿಯ ಅಧಿಸೂಚನೆ ಸಂಖ್ಯೆ:ಜಿ.ಆ.ಕ/02/ಸಿಬ್ಬಂದಿ(ಸಿಎಸ್ಎಸ್)/2019-20 ದಿನಾಂಕ: 09-10-2019.
5. ದಿನಾಂಕ:20/08/2020 ರ ಸಭಾ ನಡವಳಿಗಳು.

********

ಜಿಲ್ಲಾ ಆಯುಷ್ ಕಛೇರಿ, ಹಾಸನ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಈ ಕೆಳಕಂಡ ಸರ್ಕಾರಿ ಆಯುಷ್ ಆಸ್ಪತ್ರೆಗಳನ್ನು ಕೇಂದ್ರ ಪುರಸ್ಕೃತ ಯೋಜನೆಯಡಿ ಮೇಲ್ದರ್ಜೇಗೇರಿಸಲಾಗಿದೆ. ಈ ಮೇಲ್ದರ್ಜೇಗೇರಿಸಿರುವ ಆಸ್ಪತ್ರೆಗಳ ಮುಂದಿನ ಕಾಲಂನಲ್ಲಿ ನಮೂದಿಸಿರುವ ತಜ್ಞ ವೈದ್ಯರು/ಅರೆ ವೈದ್ಯಕೀಯ ಸಿಬ್ಬಂದಿ ಹುದ್ದೆಗಳನ್ನು ತಾತ್ಕಾಲಿಕವಾಗಿ ಗುತ್ತಿಗೆ ಆಧಾರದ ದಿನಾಂಕ:31-03-2021 ರ ವರೆಗೆ ಭರ್ತಿ ಮಾಡಿಕೊಳ್ಳಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ದಿನಾಂಕ:09-10-2020 ರಿಂದ ಅರ್ಜಿಗಳನ್ನು ಜಿಲ್ಲಾ ಆಯುಷ್ ಅಧಿಕಾರಿಗಳ ಕಛೇರಿ, ಹಾಸನ ಮತ್ತು ವೆಬ್‌ಸೈಟ್ ವಿಳಾಸ www.hassan.nic.in ಇಲ್ಲಿ ಪಡೆಯಬಹುದಾಗಿದೆ. ಭರ್ತಿ ಮಾಡಿದ ಅರ್ಜಿಗಳನ್ನು ಸಲ್ಲಿಸಲು ಕೊನೆಯ **ದಿನಾಂಕ:10-11-2020 ರ ಸಂಜೆ 4.30 ಗಂಟೆಯವರೆಗೆ** ನಂತರ ಬಂದ ಅರ್ಜಿಗಳನ್ನು ತಿರಸ್ಕರಿಸಲಾಗುವುದು. ಭರ್ತಿ ಮಾಡಿದ ಅರ್ಜಿಗಳನ್ನು ಖುದ್ದಾಗಿ ಅಥವಾ ಅಂಚೆ ಮೂಲಕ ಈ ಕಛೇರಿ ವಿಳಾಸಕ್ಕೆ ಸಲ್ಲಿಸಿದ್ದಲ್ಲಿ ಮಾತ್ರ ಪರಿಗಣಿಸಲಾಗುವುದು. ಷರತ್ತು & ನಿಬಂಧನೆಗಳು ಹಾಗೂ ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಆಯುಷ್ ಅಧಿಕಾರಿಗಳ ಕಛೇರಿ, ಹಾಸನ ಇಲ್ಲಿ ಸಂಪರ್ಕಿಸುವುದು.

| ಕ್ರ. ಸಂ | ಹುದ್ದೆಗಳ ಹೆಸರು | ಹುದ್ದೆಗಳು ಖಾಲಿ ಇರುವ ಸ್ಥಳ | ಸಂಖ್ಯೆ | ಮೀಸಲಾತಿ | ಸಮತಳ ಮೀಸಲಾತಿ | ಸಂಚಿತ ವೇತನ ಮಾಹೆಯಾನ | ಕನಿಷ್ಠ ವಿದ್ಯಾರ್ಹತೆ |
|---|---|---|---|---|---|---|---|
| 1 A | ತಜ್ಞ ವೈದ್ಯರು ಆಯುರ್ವೇದ | ಅರಸೀಕೆರೆ | 01 | ಸಾ.ಅ | ಗ್ರಾಮೀಣ | ರೂ. 35,000/- + (5000 ಸ್ನಾತಕೋತ್ತರ ಭತ್ಯೆ) | MS in Shalyatantra<br>MD in Panchakarma/Kayachikitsa |
| | | ಸಕಲೇಶಪುರ | 01 | 2ಬಿ | ಮಹಿಳಾ | | |
| 1 B | ತಜ್ಞ ವೈದ್ಯರು ಯುನಾನಿ | ಚನ್ನರಾಯಪಟ್ಟಣ | 01 | ಸಾ.ಅ | ಮಾಜಿ ಸೈನಿಕ | ರೂ. 35,000/- + (5000 ಸ್ನಾತಕೋತ್ತರ ಭತ್ಯೆ) | Post Graduate degree in Unani Medicine<br>If Post Graduates are not available<br>Unani Degree may be considered with 3 years of experience, without PG allowance |
| | | ಅರಕಲಗೂಡು | 01 | ಸಾ.ಅ | ಯೋಜನಾ ನಿರಾಶ್ರಿತ | | |

| | | | | | | | |
|---|---|---|---|---|---|---|---|
| 1 C | ತಜ್ಞ ವೈದ್ಯರು ಹೋಮಿಯೋಪತಿ | ಅರಸೀಕೆರೆ | 01 | 2 ಎ | ಮಹಿಳಾ | ರೂ. 35,000/- + (5000 ಸ್ನಾತಕೋತ್ತರ ಭತ್ಯೆ) | Post Graduate degree in Homeopathy Medicine If Post Graduates are not available Homeopathy Degree may be considered with 3 years of experience, without PG allowance |
| 1 D | ತಜ್ಞ ವೈದ್ಯರು ಪ್ರ.ಚಿ&ಯೋ | ಸಕಲೇಶಪುರ | 01 | ಸಾ.ಅ | ಮಹಿಳಾ | ರೂ. 35,000/- + (5000 ಸ್ನಾತಕೋತ್ತರ ಭತ್ಯೆ) | Post Graduate degree in Naturopathy & Yoga science If Post Graduates are not available BNYS Degree may be considered with 3 years of experience, without PG allowance |
| 2 | ಆಯುಷ್ ಔಷಧಿ ವಿತರಕರು | ಹಾಸನ | 01 | ಪ. ಜಾತಿ | ಮಹಿಳಾ | 15821.00 | ಎಸ್.ಎಸ್.ಎಲ್.ಸಿ ವಿದ್ಯಾರ್ಹತೆ & ಔಷಧಿ ವಿಜ್ಞಾನದಲ್ಲಿ ಡಿಪ್ಲೊಮೊ ತರಬೇತಿ ಹೊಂದಿರಬೇಕು |
| | | | 01 | ಸಾ.ಅ | ಮಹಿಳಾ | | |
| | | ಹೊಳೆನರಸೀಪುರ | 01 | ಸಾ.ಅ | ಸಾ.ಅ | | |
| | | ಚನ್ನರಾಯಪಟ್ಟಣ | 01 | ಪ್ರವರ್ಗ-1 | ಅಂಗವಿಕಲ ಅಭ್ಯರ್ಥಿ | | |
| | | ಸಕಲೇಶಪುರ | 01 | ಪ. ಜಾತಿ | ಗ್ರಾಮೀಣ | | |
| | | ಅರಸೀಕೆರೆ | 01 | ಪ. ಜಾತಿ | ಸಾ.ಅ | | |
| 3 | ಮಸಾಜಿಸ್ಟ್ | ಹೊಳೆನರಸೀಪುರ | 01 | 2ಎ | ಮಹಿಳಾ | 11356.00 | ಕನಿಷ್ಠ 7 ನೇ ತರಗತಿ ವಿದ್ಯಾರ್ಹತೆ ಹಾಗೂ ಆಯುಷ್ ಆಸ್ಪತ್ರೆ /ಚಿಕಿತ್ಸಾಲಯಗಳಲ್ಲಿ ಮಸಾಜಿಸ್ಟ್‌ಗಳಾಗಿ ಕರ್ತವ್ಯ ನಿರ್ವಹಿಸಿರುವ ಅನುಭವ ಹೊಂದಿರತಕ್ಕದ್ದು. |
| | | ಅರಸೀಕೆರೆ | 01 | 2ಎ | ಮಹಿಳಾ | | |
| | | ಅರಸೀಕೆರೆ | 01 | ಸಾ.ಅ | ಗ್ರಾಮೀಣ | | |
| | | ಸಕಲೇಶಪುರ | 01 | 2ಬಿ | ಮಹಿಳಾ | | |
| 4 | ಕ್ಷಾರಸೂತ್ರ ಅಟೆಂಡೆಂಟ್ | ಹೊಳೆನರಸೀಪುರ | 01 | ಪ.ಪಂ | ಮಹಿಳಾ | 11356.00 | ಕನಿಷ್ಠ 10 ನೇ ತರಗತಿ ವಿದ್ಯಾರ್ಹತೆ ಹಾಗೂ ಆಯುಷ್ ಆಸ್ಪತ್ರೆಗಳಲ್ಲಿ ಕರ್ತವ್ಯ ನಿರ್ವಹಿಸಿದ ಅನುಭವ ಹೊಂದಿರತಕ್ಕದ್ದು. |
| | | ಅರಸೀಕೆರೆ | 01 | ಸಾ.ಅ | ಮಹಿಳಾ | | |
| 5 | ಸ್ತ್ರೀ ರೋಗ ಅಟೆಂಡೆಂಟ್ | ಅರಸೀಕೆರೆ | 01 | ಸಾ.ಅ | ಮಹಿಳಾ | 11356.00 | ಕನಿಷ್ಠ 10 ನೇ ತರಗತಿ ವಿದ್ಯಾರ್ಹತೆ ಹಾಗೂ ಆಯುಷ್ ಆಸ್ಪತ್ರೆಗಳಲ್ಲಿ ಕರ್ತವ್ಯ ನಿರ್ವಹಿಸಿದ ಅನುಭವ ಹೊಂದಿರತಕ್ಕದ್ದು. |
| 6 | ಮಲ್ಟಿಪರ್ಪಸ್ ವರ್ಕರ್ | ಅರಸೀಕೆರೆ | 01 | 2ಬಿ | ಮಹಿಳಾ | 10300.00 | ಕನಿಷ್ಠ 10 ನೇ ತರಗತಿ ವಿದ್ಯಾರ್ಹತೆ |

<u>**ಅಭ್ಯರ್ಥಿಗಳಿಗೆ ವಿಶೇಷ ಸೂಚನೆ:**</u>

1. **ವಯೋಮಿತಿ** : ದಿನಾಂಕ 10-11-2020 ರಂದು ಎಲ್ಲಾ ವರ್ಗದವರು ಕನಿಷ್ಠ 18 ವರ್ಷ ಪೂರ್ಣಗೊಂಡಿರತಕ್ಕದ್ದು ಹಾಗೂ ಗರಿಷ್ಠ ಪ.ಜಾತಿ ಮತ್ತು ಪ.ಪಂಗಡದವರಿಗೆ 40 ವರ್ಷ, ಪ್ರ-1, 2ಎ, 2ಬಿ, 3ಎ, 3ಬಿ ಅಭ್ಯರ್ಥಿಗಳಿಗೆ 38 ವರ್ಷ, ಹಾಗೂ ಸಾಮಾನ್ಯ ಅಭ್ಯರ್ಥಿಗಳಿಗೆ 35 ವರ್ಷ ಮೀರಿರಬಾರದು.

2. **ಜಾತಿ ಪ್ರಮಾಣ ಪತ್ರ:-**
   ಎ) ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಅಭ್ಯರ್ಥಿಗಳು ನಮೂನೆ-ಡಿ
   ಬಿ) ಪ್ರವರ್ಗ -1ರ ಅಭ್ಯರ್ಥಿಗಳು ನಮೂನೆ-ಇ
   ಸಿ) ಪ್ರವರ್ಗ 2ಎ, 2ಬಿ, 3ಎ, 3ಬಿ ಅಭ್ಯರ್ಥಿಗಳು ನಮೂನೆ-ಎಫ್
   ಮೇಲ್ಕಂಡ ಜಾತಿ ಪ್ರಮಾಣ ಪತ್ರಗಳನ್ನು ಅರ್ಜಿ ಸಲ್ಲಿಸಲು ನಿಗಧಿಪಡಿಸಿದ ಕೊನೆಯ ದಿನಾಂಕಕ್ಕೆ ಚಾಲ್ತಿಯಲ್ಲಿರುವಂತೆ ಸಂಬಂಧಿಸಿದ ತಹಶೀಲ್ದಾರರಿಂದ ಪಡೆದಿರಬೇಕು.
3. ಅರ್ಜಿಯಲ್ಲಿ ಭರ್ತಿ ಮಾಡಿರುವ ವಿದ್ಯಾರ್ಹತೆ/ಮೀಸಲಾತಿಯನ್ನು ಮಾತ್ರ ಪರಿಗಣಿಸಲಾಗುವುದು. ಹೆಚ್ಚಿನ ವಿದ್ಯಾರ್ಹತೆ ಅಥವಾ ತದನಂತರದ ಮೀಸಲಾತಿ ಪರಿಗಣನೆಗೆ ಅವಕಾಶವಿರುವುದಿಲ್ಲ. ಒಮ್ಮೆ ಸಲ್ಲಿಸಿದ ಅರ್ಜಿಯಲ್ಲಿ ಯಾವುದೇ ಬದಲಾವಣೆಗೆ ಅವಕಾಶವಿರುವುದಿಲ್ಲ.
4. ಅಭ್ಯರ್ಥಿಗಳು ಒಂದಕ್ಕಿಂತ ಹೆಚ್ಚು ಹುದ್ದೆಗಳಿಗೆ ಅರ್ಜಿ ಸಲ್ಲಿಸಲು ಬಯಸಿದಲ್ಲಿ ಪ್ರತ್ಯೇಕ ಅರ್ಜಿಗಳನ್ನು ಸಲ್ಲಿಸತಕ್ಕದ್ದು. ಒಂದೇ ಅರ್ಜಿಯಲ್ಲಿ ಒಂದಕ್ಕಿಂತ ಹೆಚ್ಚು ಹುದ್ದೆಗಳಿಗೆ ಅರ್ಜಿ ಸಲ್ಲಿಸಿದ ಪಕ್ಷದಲ್ಲಿ ಅರ್ಜಿಗಳು ಸ್ವಯಂ ತಿರಸ್ಕೃತಗೊಳ್ಳಲಿದೆ.
5. ಅರ್ಜಿ ಸಲ್ಲಿಸುತ್ತಿರುವ ಹುದ್ದೆಯ ಹೆಸರನ್ನು ಲಕೋಟೆಯ ಮೇಲೆ ದಪ್ಪ ಅಕ್ಷರಗಳಲ್ಲಿ ನಮೂದಿಸುವುದು.
6. **ಜನ್ಮ ದಿನಾಂಕ ದೃಢೀಕರಣ ಪತ್ರ** (ಎಸ್.ಎಸ್.ಎಲ್.ಸಿ / ತತ್ಸಮಾನ ವಿದ್ಯಾರ್ಹತೆಯ ಅಂಕಪಟ್ಟಿ ಅಥವಾ ಶಾಲಾ ವರ್ಗಾವಣೆ ಪ್ರಮಾಣ ಪತ್ರ ಅಥವಾ ಜನ್ಮ ದಿನಾಂಕವನ್ನು ತೋರಿಸುವ ಸಂಚಿತ ದಾಖಲೆಯ ಉದ್ಧೃತಭಾಗ (Extract of Cumulative Record)
7. **ಗ್ರಾಮೀಣಾ ಅಭ್ಯರ್ಥಿ ಮೀಸಲಾತಿ:-** 01 ರಿಂದ 10 ನೇ ತರಗತಿ ವರೆಗೆ ಗ್ರಾಮೀಣ ಪ್ರದೇಶದಲ್ಲಿ ವ್ಯಾಸಂಗ ಮಾಡಿರುವ ಬಗ್ಗೆ ಪ್ರಮಾಣ ಪತ್ರವನ್ನು ಮುಖ್ಯೋಪಾಧ್ಯಯರಿಂದ ಪಡೆದು ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳಿಂದ ಕೊನೆಯ ದಿನಾಂಕಕ್ಕೆ ಚಾಲ್ತಿಯಲ್ಲಿರುವಂತೆ ಮೇಲು ರುಜು ಮಾಡಿಸಿರತಕ್ಕದ್ದು.
8. **ಕನ್ನಡ ಮಾಧ್ಯಮ ಅಭ್ಯರ್ಥಿ:**01 ರಿಂದ 10 ನೇ ತರಗತಿ ವರೆಗೆ ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿರುವ ಬಗ್ಗೆ ಪ್ರಮಾಣ ಪತ್ರವನ್ನು ಮುಖ್ಯೋಪಾಧ್ಯಯರಿಂದ ಪಡೆದು ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳಿಂದ ಕೊನೆಯ ದಿನಾಂಕಕ್ಕೆ ಚಾಲ್ತಿಯಲ್ಲಿರುವಂತೆ ಮೇಲು ರುಜು ಮಾಡಿಸಿರತಕ್ಕದ್ದು.
9. **ಅಂಗವಿಕಲ ಅಭ್ಯರ್ಥಿ ಮೀಸಲಾತಿ:-** ಸರ್ಕಾರದ ಅಧಿಸೂಚನೆ ಸಂಖ್ಯೆ:ಸಿಆಸುಇ/115/ಸೇನನಿ/2005, ದಿನಾಂಕ: 19-11-2005 ರಲ್ಲಿ ನಿಗಧಿಪಡಿಸಿರುವ ನಮೂನೆಯಲ್ಲಿ ಅಂಗವಿಕಲ ಪ್ರಮಾಣ ಪತ್ರವನ್ನು ಸರ್ಕಾರಿ ಆಸ್ಪತ್ರೆಗಳಲ್ಲಿನ ವೈದ್ಯಕೀಯ ಮಂಡಳಿಯಿಂದ ಕೊನೆಯ ದಿನಾಂಕಕ್ಕೆ ಚಾಲ್ತಿಯಲ್ಲಿರುವಂತೆ ಪಡೆದಿರಬೇಕು.
10. **ಯೋಜನಾ ನಿರಾಶ್ರಿತ ಮೀಸಲಾತಿ:-** ಸರ್ಕಾರದ ಅಧಿಸೂಚನೆ ದಿನಾಂಕ: 23-11-2000 ನಮೂನೆಯಲ್ಲಿ ಅರ್ಜಿ ಸಲ್ಲಿಸಲು ನಿಗಧಿಪಡಿಸಿದ ಕೊನೆಯ ದಿನಾಂಕಕ್ಕೆ ಚಾಲ್ತಿಯಲ್ಲಿರುವಂತೆ ಸಂಬಂಧಿಸಿದ ತಹಶೀಲ್ದಾರರಿಂದ ಪಡೆದಿರಬೇಕು.
11. **ಮಾಜಿ ಸೈನಿಕರ ಮೀಸಲಾತಿ:-** ಅರ್ಜಿಯಲ್ಲಿ ಮಾಜಿ ಸೈನಿಕ ಮೀಸಲಾತಿಯನ್ನು ಕೋರಿರುವ ಅಭ್ಯರ್ಥಿಗಳು ಸೇವೆಯಿಂದ ಬಿಡುಗಡೆಯಾದ ನಂತರ ನೀಡಿದ ಬಿಡುಗಡೆ ಪ್ರಮಾಣ ಪತ್ರವನ್ನು ಹಾಜರುಪಡಿಸತಕ್ಕದ್ದು
12. ನಿಗಧಿಪಡಿಸಿ ಮೀಸಲಾತಿಯ ಅಭ್ಯರ್ಥಿಗಳು ದೊರೆಯದಿದ್ದ ಪಕ್ಷದಲ್ಲಿ ಈ ಹುದ್ದೆಗಳನ್ನು ಸಾಮಾನ್ಯ ವರ್ಗದ ಅಭ್ಯರ್ಥಿಗಳಿಗೆ ಪರಿವರ್ತಿಸಲು ನೇಮಕಾತಿ ಸಮಿತಿಯಿಂದ ಅನುಮೋದನೆ ಪಡೆದು ಭರ್ತಿ ಮಾಡಲು ಕ್ರಮವಹಿಸಲಾಗುವುದು.
13. ಮಾನ್ಯ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಆಯ್ಕೆ ಪ್ರಕ್ರಿಯೆ ಮೂಲಕ ನೇಮಕಾತಿ ಮಾಡಲಾಗುವುದು. ಎಲ್ಲಾ ಹುದ್ದೆಗಳು ಗುತ್ತಿಗೆ ಆಧಾರದ ಮೇಲೆ ತಾತ್ಕಾಲಿಕ ಹುದ್ದೆಗಳಾಗಿದ್ದು ನಿರ್ದೇಶನಾಲಯದ ಆದೇಶದ ಎಲ್ಲಾ ಷರತ್ತು ಮತ್ತು ನಿಬಂಧನೆಗಳಿಗೆ ಒಳಪಟ್ಟಿರುತ್ತದೆ.
14. ಅರ್ಜಿಗಳನ್ನು ಪಡೆಯಲು ಯಾವುದೇ ಶುಲ್ಕವಿರುವುದಿಲ್ಲ.

**ಆಯ್ಕೆ ಪ್ರಕ್ರಿಯೆ:**

1. **ತಜ್ಞ ವೈದ್ಯರ ಹುದ್ದೆಗಳಿಗೆ:** ಸ್ನಾತಕೋತ್ತರ ಪದವಿ ವೈದ್ಯರನ್ನು ಆಯ್ಕೆ ಮಾಡಲು ಅಭ್ಯರ್ಥಿಗಳು ಪದವಿಯಲ್ಲಿ ಪಡೆದಿರುವ ಎಲ್ಲಾ ಪರೀಕ್ಷೆಗಳ ಅಂಕಗಳನ್ನು ಒಟ್ಟುಗೂಡಿಸಿ ಶೇಕಡವಾರು ಅಂಕಗಳಿಗೆ ಲೆಕ್ಕ ಮಾಡಿ ಮೆರಿಟ್, ಸಂದರ್ಶನ ಹಾಗೂ ಮೀಸಲಾತಿಯನ್ವಯ ಆಯ್ಕೆ ಮಾಡಲಾಗುವುದು.

2. **ಔಷಧಿ ವಿತರಕರು:** ಔಷಧಿ ವಿಜ್ಞಾನದಲ್ಲಿ ಡಿಪ್ಲೋಮಾ ವಿದ್ಯಾರ್ಹತೆಯಲ್ಲಿ ಪಡೆದಿರುವ ಎಲ್ಲಾ ಪರೀಕೆಗಳ ಅಂಕಗಳನ್ನು ಒಟ್ಟುಗೂಡಿಸಿ ಶೇಕಡವಾರು ಅಂಕಗಳಿಗೆ ಲೆಕ್ಕ ಮಾಡಿ ಮೆರಿಟ್, ಸಂದರ್ಶನ ಹಾಗೂ ಮೀಸಲಾತಿಯನ್ವಯ ಆಯ್ಕೆ ಮಾಡಲಾಗುವುದು.
3. **ಮಸಾಜಿಸ್ಟ್:** ಮಸಾಜಿಸ್ಟ್ ತರಬೇತಿ/ಅನುಭವವನ್ನು ಹೊಂದಿರುವ ಅಭ್ಯರ್ಥಿಗಳ 7ನೇ ತರಗತಿ ವಿದ್ಯಾರ್ಹತೆಯಲ್ಲಿ ಪಡೆದಿರುವ ಎಲ್ಲಾ ಪರೀಕೆಗಳ ಅಂಕಗಳನ್ನು ಒಟ್ಟುಗೂಡಿಸಿ ಶೇಕಡವಾರು ಅಂಕಗಳಿಗೆ ಲೆಕ್ಕ ಮಾಡಿ ಮೆರಿಟ್, ಸಂದರ್ಶನ ಹಾಗೂ ಮೀಸಲಾತಿಯನ್ವಯ ಆಯ್ಕೆ ಮಾಡಲಾಗುವುದು.
4. **ಕ್ಷಾರಸೂತ್ರ ಅಟೆಂಡರ್:** ಆಯುಷ್ ಆಸ್ಪತ್ರೆಗಳಲ್ಲಿ ಕರ್ತವ್ಯ ನಿರ್ವಹಿಸಿದ ಅನುಭವ ಹೊಂದಿರುವ ಅಭ್ಯರ್ಥಿಗಳ 10ನೇ ತರಗತಿ ವಿದ್ಯಾರ್ಹತೆಯಲ್ಲಿ ಪಡೆದಿರುವ ಎಲ್ಲಾ ಪರೀಕೆಗಳ ಅಂಕಗಳನ್ನು ಒಟ್ಟುಗೂಡಿಸಿ ಶೇಕಡವಾರು ಅಂಕಗಳಿಗೆ ಲೆಕ್ಕ ಮಾಡಿ ಮೆರಿಟ್, ಸಂದರ್ಶನ ಹಾಗೂ ಮೀಸಲಾತಿಯನ್ವಯ ಆಯ್ಕೆ ಮಾಡಲಾಗುವುದು.
5. **ಸ್ತ್ರೀರೋಗ ಅಟೆಂಡರ್:** ಆಯುಷ್ ಆಸ್ಪತ್ರೆಗಳಲ್ಲಿ ಕರ್ತವ್ಯ ನಿರ್ವಹಿಸಿದ ಅನುಭವ ಹೊಂದಿರುವ ಅಭ್ಯರ್ಥಿಗಳ 10ನೇ ತರಗತಿ ವಿದ್ಯಾರ್ಹತೆಯಲ್ಲಿ ಪಡೆದಿರುವ ಎಲ್ಲಾ ಪರೀಕೆಗಳ ಅಂಕಗಳನ್ನು ಒಟ್ಟುಗೂಡಿಸಿ ಶೇಕಡವಾರು ಅಂಕಗಳಿಗೆ ಲೆಕ್ಕ ಮಾಡಿ ಮೆರಿಟ್, ಸಂದರ್ಶನ ಹಾಗೂ ಮೀಸಲಾತಿಯನ್ವಯ ಆಯ್ಕೆ ಮಾಡಲಾಗುವುದು.
6. **ಮಲ್ಟಿಪರ್ಪಸ್ ವರ್ಕರ್:** ಅಭ್ಯರ್ಥಿಗಳ 10ನೇ ತರಗತಿ ವಿದ್ಯಾರ್ಹತೆಯಲ್ಲಿ ಪಡೆದಿರುವ ಎಲ್ಲಾ ಪರೀಕೆಗಳ ಅಂಕಗಳನ್ನು ಒಟ್ಟುಗೂಡಿಸಿ ಶೇಕಡವಾರು ಅಂಕಗಳಿಗೆ ಲೆಕ್ಕ ಮಾಡಿ ಮೆರಿಟ್, ಸಂದರ್ಶನ ಹಾಗೂ ಮೀಸಲಾತಿಯನ್ವಯ ಆಯ್ಕೆ ಮಾಡಲಾಗುವುದು.

ಸದಸ್ಯ ಕಾರ್ಯದರ್ಶಿಗಳು
ಜಿಲ್ಲಾ ಮಟ್ಟದ ಆಯುಷ್ ಆಸ್ಪತ್ರೆಗಳ ಆರೋಗ್ಯ ರಕ್ಷಾ ಸಮಿತಿ,
ಜಿಲ್ಲೆ/ಉಪಜಿಲ್ಲೆ ಮಟ್ಟದಲ್ಲಿ ಆಯುಷ್ ಆಸ್ಪತ್ರೆಗಳಿಗೆ
ಹೆಚ್ಚುವರಿ ಸಿಬ್ಬಂದಿ ನೇಮಕಾತಿ ಸಮಿತಿ, ಹಾಸನ.

**ಪ್ರತಿಯನ್ನು ಗೌರವಪೂರ್ವಕಗಳೊಂದಿಗೆ**

1. ಮಾನ್ಯ ಆಯುಕ್ತರು, ಆಯುಷ್ ನಿರ್ದೇಶನಾಲಯ, ಬೆಂಗಳೂರು ರವರಿಗೆ.
2. ಮಾನ್ಯ ಜಿಲ್ಲಾಧಿಕಾರಿಗಳು, ಜಿಲ್ಲಾಧಿಕಾರಿಗಳ ಕಛೇರಿ, ಹಾಸನ ರವರಿಗೆ.
3. ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಹಾಸನ ರವರಿಗೆ.
4. ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು, ಹಾಸನ ರವರಿಗೆ.
5. ಸಮಾಜ ಕಲ್ಯಾಣಾಧಿಕಾರಿಗಳು, ಸಮಾಜ ಕಲ್ಯಾಣ ಇಲಾಖೆ, ಹಾಸನ ರವರಿಗೆ.
6. ಕಛೇರಿ ಪ್ರತಿ.

ಕರ್ನಾಟಕ ಸರ್ಕಾರ
ಜಿಲ್ಲಾ ಪಂಚಾಯತ್, ಹಾಸನ
ಆಯುಷ್ ಇಲಾಖೆ
ಜಿಲ್ಲಾ ಆಯುಷ್ ಅಧಿಕಾರಿಗಳ ಕಛೇರಿ, ಹೊಸಲೈನ್ ರಸ್ತೆ, ಹಾಸನ -573201.
ಇ-ಮೇಲ್ ವಿಳಾಸ: dao.hassan09@gmail.com    ದೂರವಾಣಿ ಸಂ: 08172-272272

## ಕೇಂದ್ರ ಪುರಸ್ಕೃತಯೋಜನೆಯಲ್ಲಿ ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಅರ್ಜಿ ನಮೂನೆ

ರವರಿಗೆ,

ಮಾನ್ಯ ಸದಸ್ಯ ಕಾರ್ಯದರ್ಶಿಗಳು/
ಜಿಲ್ಲಾ ಆಯುಷ್ ಅಧಿಕಾರಿಗಳು
ಹಾಸನ

Please affix recent passport size color photo.

Do not staple the photo

**ಅರ್ಜಿ ಸಲ್ಲಿಸುತ್ತಿರುವ ಹುದ್ದೆಯ ಹೆಸರು :** ____________________________

1. ಅರ್ಜಿದಾರನ/ಳ ಪೂರ್ಣ ಹೆಸರು : ____________________________________

2. ತಂದೆ/ಪೋಷಕರ ಹೆಸರು : ____________________________

3. ಖಾಯಂ ವಿಳಾಸ : ____________________________________

____________________________________

____________________________________

4. ಅಂಚೆ ವಿಳಾಸ : ________________________________

____________________________________

____________________________________

5. ಸಂಪರ್ಕಿಸಬಹುದಾದ
ದೂರವಾಣಿ ಸಂಖ್ಯೆ : ಮೊಬೈಲ್ : ____________________________

ಸ್ಥಿರ ದೂರವಾಣಿ : ____________________________

6. ಇ-ಮೇಲ್ ವಿಳಾಸ :________________________________________

7. ಲಿಂಗ :

| ಪುರುಷ | | ಮಹಿಳೆ | |
|---|---|---|---|

8. ಜನ್ಮ ದಿನಾಂಕ (ದೃಢೀಕರಣ ಪತ್ರ ಲಗತ್ತಿಸುವುದು) :

| | | | | | | | |
|---|---|---|---|---|---|---|---|

9. ಮೀಸಲಾತಿಕೋರಿದ್ದಲ್ಲಿ :ಅನ್ವಯಿಸುವ ಬಾಕ್ಸ್‌ನಲ್ಲಿ (√) ಗುರುತು ಹಾಕಿ.
(ದೃಢೀಕರಣ ಪತ್ರ ಲಗತ್ತಿಸುವುದು)

| ಪ. ಜಾ | ಪ. ಪಂ | ಪ್ರವ-1 | 2ಎ | 2ಬಿ | 3ಎ | 3ಬಿ | ಸಾಮಾನ್ಯ |
|---|---|---|---|---|---|---|---|

| ಕ.ಮಾ. ಅ | ಗ್ರಾ. ಅ | ಯೋ. ನಿ. ಅ | ಅಂ. ವಿ. | ಮಾ. ಸೈ |
|---|---|---|---|---|

10. ವಿದ್ಯಾರ್ಹತೆ :ಅಧಿಸೂಚನೆಯಲ್ಲಿ ನೀಡಿರುವಂತೆ.

| ಕ್ರ. ಸಂ. | ವಿದ್ಯಾರ್ಹತೆ | ಒಟ್ಟು ಅಂಕಗಳು | ಗಳಿಸಿದ ಅಂಕಗಳು | ಶೇಕಡ |
|---|---|---|---|---|
| 1. | | | | |
| 2. | | | | |
| 3. | | | | |
| 4. | | | | |
| 5. | | | | |
| 6. | | | | |

ಸೂಚನೆ:

- ತಜ್ಞ ವೈದ್ಯರು ಹುದ್ದೆಗೆ ಅರ್ಜಿಯೊಂದಿಗೆ ಸ್ವಯಂ ದೃಢೀಕೃತ ಪದವಿಯ ಎಲ್ಲಾ ವರ್ಷಗಳ ಅಂಕಪಟ್ಟಿ ಹಾಗೂ ಪ್ರಮಾಣ ಪತ್ರ, ಸ್ನಾತಕೋತ್ತರ ಪದವಿ ಪ್ರಮಾಣ ಪತ್ರ, ಕೆ.ಪಿ.ಎಂ.ಇ ರಿಜಿಸ್ಟ್ರೇಷನ್ ಪತ್ರ ಹಾಗೂ ಮೀಸಲಾತಿ ಪ್ರಮಾಣ ಪತ್ರಗಳನ್ನು (ಚಾಲ್ತಿಯಲ್ಲಿರುವ) ಕಡ್ಡಾಯವಾಗಿ ಸಲ್ಲಿಸತಕ್ಕದ್ದು.
- ಅರೆ ವೈದ್ಯಕೀಯ ಸಿಬ್ಬಂದಿ ಹುದ್ದೆಗಳಿಗೆ ಅರ್ಜಿಯೊಂದಿಗೆ ಸ್ವಯಂದೃಢೀಕೃತ ವಿದ್ಯಾರ್ಹತೆ, ಮೀಸಲಾತಿ ಪ್ರಮಾಣ ಪತ್ರ (ಚಾಲ್ತಿಯಲ್ಲಿರುವ) ಹಾಗೂ ಅನುಭವದ ಪ್ರಮಾಣ ಪತ್ರಗಳನ್ನು ಕಡ್ಡಾಯವಾಗಿ ಸಲ್ಲಿಸತಕ್ಕದ್ದು.
- ಅರ್ಜಿ ಸಲ್ಲಿಸುತ್ತಿರುವ ಹುದ್ದೆಯ ಹೆಸರನ್ನು ಲಕೋಟೆಯ ಮೇಲೆ ದಪ್ಪ ಅಕ್ಷರಗಳಲ್ಲಿ ನಮೂದಿಸುವುದು.
- ಅಪೂರ್ಣ, ಹಾಗೂ ಈ ಅರ್ಜಿಯ ನಮೂನೆಯನ್ನು ಹೊರತುಪಡಿಸಿ ಇತರೆ ಯಾವುದೇ ಅರ್ಜಿಗಳನ್ನು ಸಲ್ಲಿಸಿದಲ್ಲಿ ಪ್ರಾರಂಭಿಕ ಹಂತದಲ್ಲಿಯೇ ತಿರಸ್ಕೃತಗೊಳಿಸಲಾಗುವುದು.
- ಹೆಚ್ಚಿನ ಮಾಹಿತಿಗಾಗಿವೆಬ್‌ಸೈಟ್https://hassan.nic.inಇಲ್ಲಿ ಸಂಪರ್ಕಿಸುವುದು.

ಅಭ್ಯರ್ಥಿಯ ಘೋಷಣೆ :

ಈ ಪ್ರಕಟಣೆಯಲ್ಲಿ ನೀಡಿರುವ ಎಲ್ಲಾ ಸೂಚನೆಗಳನ್ನು ಜಾಗರೂಕತೆಯಿಂದ ಓದಿಕೊಂಡಿದ್ದು, ಅವುಗಳಿಗೆ ನಾನು ಬದ್ಧನಾಗಿರುತ್ತೇನೆ/ಳೆ. ನಾನು ಈ ಸದರಿ ಹುದ್ದೆಗೆ ನಿಗಧಿಪಡಿಸಲಾದ ವಿದ್ಯಾರ್ಹತೆ, ವಯೋಮಿತಿ ಮತ್ತು ಮೀಸಲಾತಿ ಇತ್ಯಾದಿ ಎಲ್ಲಾ ನಿಬಂಧನೆಗಳನ್ನು ಓದಿ ತಿಳಿದುಕೊಂಡಿರುತ್ತೇನೆಂದು ಹಾಗೂ ನಾನು ಈ ಅರ್ಜಿಯಲ್ಲಿ ನಮೂದಿಸಿರುವ ಎಲ್ಲಾ ಹೇಳಿಕೆ/ಮಾಹಿತಿಗಳು ಸತ್ಯವಾಗಿರುತ್ತದೆ ಎಂದು ಘೋಷಿಸುತ್ತೇನೆ. ಈ ಮೇಲೆ ತಿಳಿಸಿದ ಯಾವುದೇ ಮಾಹಿತಿಗಳು ಸರಿಯಾಗಿಲ್ಲವೆಂದು ಆಯ್ಕೆ ಪೂರ್ವದಲ್ಲಾಗಲೀ ಅಥವಾ ನಂತರವಾಗಲೀ ಕಂಡು ಬಂದಲ್ಲಿ ಸದಸ್ಯ ಕಾರ್ಯದರ್ಶಿಗಳು/ಜಿಲ್ಲಾ ಆಯುಷ್ ಅಧಿಕಾರಿಗಳು ಹಾಸನ ಇವರು ಕೈಗೊಳ್ಳುವ ಸೂಕ್ತ ಕಾನೂನು ಕ್ರಮಕ್ಕೆ ನಾನು ಬದ್ಧನಾಗಿರುತ್ತೇನೆ/ಳೆ.

ಸ್ಥಳ :

ಅರ್ಜಿದಾರನ/ಳ ಸಹಿ

ದಿನಾಂಕ :

ಕರ್ನಾಟಕ ಸರ್ಕಾರ
ಜಿಲ್ಲಾ ಪಂಚಾಯತ್, ಹಾಸನ
ಆಯುಷ್ ಇಲಾಖೆ
ಜಿಲ್ಲಾ ಆಯುಷ್ ಅಧಿಕಾರಿಗಳ ಕಛೇರಿ, ಹೊಸಲೈನ್ ರಸ್ತೆ, ಹಾಸನ -573201,
ಇ-ಮೇಲ್ ವಿಳಾಸ: dao.hassan09@gmail.com
ದೂರವಾಣಿ ಸಂ: 08172-272272

## ಪರಿಶೀಲನಾ ಪಟ್ಟಿ(Check List)

| ಕ್ರ. ಸಂ. | ವಿವರ | ಅಭ್ಯರ್ಥಿಗಳು ಭರ್ತಿ ಮಾಡತಕ್ಕದ್ದು | ಕಛೇರಿಉಪಯೋಗಕ್ಕೆ | |
|---|---|---|---|---|
| | | ಹೌದು/ ಇಲ್ಲ | ಹೌದು/ ಇಲ್ಲ | ಷರಾ |
| 1. | ಅರ್ಜಿಯನ್ನು ಸಂಪೂರ್ಣವಾಗಿ ತುಂಬಲಾಗಿದೆ | | | |
| 2. | ಭಾವ ಚಿತ್ರವನ್ನು ಅಂಟಿಸಲಾಗಿದೆ | | | |
| 3. | ಎಸ್.ಎಸ್.ಎಲ್.ಸಿ ಅಂಕಪಟ್ಟಿ ಪ್ರತಿ ಲಗತ್ತಿಸಿದೆ | | | |
| 4. | ಅಧಿಸೂಚನೆಯಲ್ಲಿ ನೀಡಿರುವ ವಿದ್ಯಾರ್ಹತೆಯ ಅಂಕಪಟ್ಟಿ ಪ್ರತಿಗಳನ್ನು ಲಗತ್ತಿಸಿದೆ | | | |
| 5. | ಆಯುಷ್ ಆಸ್ಪತ್ರೆಯಲ್ಲಿ ಕೆಲಸ ನಿರ್ವಹಿಸಿರುವ ಅನುಭವದ ಪ್ರಮಾಣ ಪತ್ರ ಲಗತ್ತಿಸಿದೆ | | | |
| 6. | ಕೆ.ಎ.ಯು.ಪಿ. ಬೋರ್ಡ್ ರಿಜಿಸ್ಟ್ರೇಷನ್ ಪ್ರತಿ ಲಗತ್ತಿಸಿದೆ | | | |
| 7. | ಜಾತಿ ಮತ್ತು ಆದಾಯ ಪ್ರಮಾಣ ಪತ್ರ ಲಗತ್ತಿಸಿದೆ (ನಿಮಗೆ ಅನ್ವಯಿಸುವುದಾದರೆ) | | | |
| 8. | ಇತರೆ ಮೀಸಲಾತಿ ಪ್ರಮಾಣ ಪತ್ರ ಲಗತ್ತಿಸಿದೆ (ನಿಮಗೆ ಅನ್ವಯಿಸುವುದಾದರೆ) | | | |
| 9. | ಇ-ಮೇಲ್ ವಿಳಾಸ ನಮೂದಿಸಿದೆ | | | |
| 10. | ಹೆಚ್ಚುವರಿ ವಿದ್ಯಾರ್ಹತೆ ಪ್ರಮಾಣ ಪತ್ರ ಲಗತ್ತಿಸಿದೆ | | | |

ಅಭ್ಯರ್ಥಿಯ ಸಹಿ

ಅರ್ಜಿಯನ್ನು ತೆಗೆದುಕೊಂಡವರ ಹೆಸರು:

ಅರ್ಜಿಯನ್ನು ಪರಿಶೀಲಿಸಿದ ಅಧಿಕಾರಿಯ ಹೆಸರು:

ಸದಸ್ಯ ಕಾರ್ಯದರ್ಶಿಗಳು
ಜಿಲ್ಲಾ ಮಟ್ಟದಆಯುಷ್ ಆಸ್ಪತ್ರೆಗಳ ಆರೋಗ್ಯರಕ್ಷಾ ಸಮಿತಿ,
ಜಿಲ್ಲೆ/ಉಪಜಿಲ್ಲೆ ಮಟ್ಟದಲ್ಲಿಆಯುಷ್ ಆಸ್ಪತ್ರೆಗಳಿಗೆ
ಹೆಚ್ಚುವರಿ ಸಿಬ್ಬಂದಿ ನೇಮಕಾತಿ ಸಮಿತಿ, ಹಾಸನ